**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **29-01-2024** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 7 PW-6

ಸಾಕ್ಷಿದಾರರ ಹೆಸರು - ಲಕ್ಷ್ಮಣ ಸಿದ್ದಪ್ಪಾ ದೊಣವಾಡ

ವಯಸ್ಸು - 54 ವರ್ಷ

ಉದ್ಯೋಗ - ಎ.ಎಸ್.ಆಯ್. ಕಡಕೋಳ ಪಿ.ಎಸ್.

ಸಾಕೀನ - ಕಡಕೋಳ

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಾನು ಎಪ್ರೀಲ್ 2016 ರಿಂದ ಎಪ್ರೀಲ್ 2020 ರವರೆಗೆ ಗೆಕಾಕ ಶಹರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾರಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 28-04-2017 ರಂದು ಠಾಣೆಯ ಪ್ರಭಾರದಲ್ಲಿದ್ದಾಗ ಮೇಲಾಧಿಕಾರಿಗಳಿಂದ ಬಂದ ಅರ್ಜಿಯನ್ನು ಸ್ವೀಕರಿಸಿ ಎನ್.ಸಿ. ನಂ. 8/2017 ರಂತೆ ದಾಖಲ ಮಾಡಿಕೊಂಡು ಮಾನ್ಯ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡು ಠಾಣಾ ಮೊಕದ್ದಮೆ ಸಂಖ್ಯೆಃ 66/2017 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿ ಪ್ರಕರಣ ದಾಖಲು ಮಾಡಿಕೊಂಡಿರುತ್ತೇನೆ. ಸಾಕ್ಷಿಗೆ ಚಾಸಾ-1 ರವರು ನೀಡಿದ ದೂರನ್ನು ತೋರಿಸಲಾಗಿ, ಅದರಲ್ಲಿರುವ ತಮ್ಮ ಎರಡು ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರೀ ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.1 ಬಿ ಮತ್ತು 1 ಸಿ ಎಂದು ಗುರುತಿಸಲಾಯಿತು. ನಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರೀ ಪ್ರಥಮ ವರ್ತಮಾನ ವರದಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿ.ಪಿ.5, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಂಜೆ ಘಟನಾ ಸ್ಥಳಕ್ಕೆ ಪಂಚಸಾಕ್ಷಿದಾರರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಹೋಗಿ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಸಾಯಂಕಾಲ 5.40 ಗಂಟೆಯಿಂದ 6-30 ಗಂಟೆವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ನಾನೀಗ ಸ್ಥಳ ಪಂಚಾನಮೆಯನ್ನು ನೋಡುತ್ತಿದ್ದು ಈಗಾಗಲೇ ನಿಪಿ-2 ಎಂದು ಗುರುತಿಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಜರುಗಿಸುವ ಸಮಯದಲ್ಲಿ ಒಂದು ಸಣ್ಣ ಕೊಡ್ಲಿಯ ಕಟ್ಟಿಗೆ ಕಾಂವನ್ನು

ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಿದ್ದು. ಸಾಕ್ಷಿಯು ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಅದೇ ದಿನ ಚಾಸಾ-1 ರವರ ಮರು ಹೇಳಿಕೆ ಹಾಗೂ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-8 ರವರಿಗೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಾದ ಶ್ರೀ ವಾಯ್ ಎಲ್ ಡಿ ರವರಿಂದಃ</u>

1. ದಿಃ 27-03-2017 ರಂದು ನನಗೆ ಆಸ್ಪತ್ರೆಯಿದ ಈ ಪ್ರಕರಣದ ಕುರಿತು ಎಂ.ಎಲ್.ಸಿ ಬಂದಿರಲಿಲ್ಲಾ ಎಂದರೆ ಸರಿ. ನಮ್ಮ ಠಾಣಾ ಸಿಬ್ಬಂದಿ ಎಸ್ ಪಿ ಕಚೇರಿಯಿಂದ ನಿಪಿ-1 ರ ದೂರನ್ನು ತೆಗೆದುಕೊಂಡು ಬಂದಿರುತ್ತಾರೆ. ಅವರ ಹೆಸರು ನನಗೆ ಈಗ ನೆನಪಿಲ್ಲ. ನಿಪಿ-1 ರ ದೂರಿನಲ್ಲಿ ಚಾಸಾ-1 ರವರು ಮು.ಮಾ 1 ರಿಂದ ತನಗೆ ಹಲ್ಲೆ ಮಾಡಿರುವ ಕುರಿತು ಬರೆದಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಚಾಸಾ-1 ರವರು ತಮ್ಮ ಮರು ಹೇಳಿಕೆಯಲ್ಲಿ ಮು.ಮಾ 1 ರಿಂದ ಹಲ್ಲೆ ಮಾಡಿರುವ ಕುರಿತು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರು ನನ್ನ ಮುಂದೆ ಮರು ಹೇಳಿಕೆ ನೀಡಿರುವುದಿಲ್ಲಾ ಎಂದರೆ ಸರಿಯಲ್ಲ.

2. ಪಂಚರನ್ನು ನಾನೇ ಕರೆದುಕೊಂಡು ಹೋಗಿರುತ್ತೇನೆ. ಪಂಚರಿಗೆ ನೋಟಿಸು ನೀಡಿರುವುದಿಲ್ಲಾ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಭೇಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ 1 ರ ವಸ್ತುವನ್ನು ನಾನು ಅಮಾನತ್ತು ಪಡಿಸಿಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ. ನನ್ನ ಮುಂದೆ ಚಾಸಾ-1 ರಿಂದ 5 ರವರು ಯಾವದೇ ಹೇಳಿಕೆಗಳನ್ನು ನೀಡಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ದೂರನ್ನು ಸ್ವೀಕರಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **07-08-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 3 PW-5

| | | |
|---|---|---|
| ಸಾಕ್ಷಿದಾರರ ಹೆಸರು | - | ಮಾರುತಿ ಭಿರಪ್ಪಾ ಶಿಂಗಾಡಿ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಚಾಲಕ |
| ಸಾಕೀನ | - | ಘಟಪ್ರಭಾ |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 2 ರವರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ. ನನಗೆ ಪೊಲೀಸರು ಯಾವುದೇ ಪಂಚನಾಮೆಕ್ಕೆ ಕರೆಸಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2-ಬಿ ಎಂದು ಗುರುತಿಸಲಾಯಿತು. ನಾನು ನಿಪಿ-2 ಕ್ಕೆ ಪೊಲೀಸ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ ಒಂದು ಬಿಳಿ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 28-04-2017 ರಂದು ನನ್ನನ್ನು ಹಾಗೂ ಚಾಸಾ-2 ರವರನ್ನು ಪೊಲೀಸರು ಪಂಚರಾಗಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-2 ರವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಸಾಯಂಕಾಲ 05.45 ರಿಂದ 06.30 ಗಂಟೆಯವರೆಗೆ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆ ಜರುಗಿಸುವಾಗ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ

ಕೊಡಲಿಯ ಕಟ್ಟಿಗೆಯ ಕಾವನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ</u>

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **26-07-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 5 PW-4

ಸಾಕ್ಷಿದಾರರ ಹೆಸರು - ಮುರಗೆಪ್ಪಾ ಬಳಂದಪ್ಪಾ ಉರ್ಫ ಕೊಳಂದಪ್ಪಾ ಗೌಡರ
ವಯಸ್ಸು - 69 ವರ್ಷ
ಉದ್ಯೋಗ - ವ್ಯಾಪಾರ
ಸಾಕೀನ - ಗೋಕಾಕ

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1, 4 ಮತ್ತು ಈ ದಿನ ನ್ಯಾಯಾಲಯದ ಮುಂದೆ ಇರುವ ಪರಿಚಯ ಇದೆ. ನಾನು ಯಾವುದೆ ಗಲಾಟೆ ನೋಡಿಲ್ಲ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಪ್ರಾಣ ಬೆದರಿಕೆ ಹಾಕಿಲ್ಲ. ಪೋಲಿಸರು ಈ ಪ್ರಕರಣದ ಕುರಿತು ನನಗೆ ವಿಚಾರ ಮಾಡಿಲ್ಲ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿ 27-06-2017 ರಂದು ನಾನು ಮತ್ತು ಚಾಸಾ-4 ರವರು ಕೂಡಿಕೊಂಡು ಚಾಸಾ-1 ರವರ ಮನೆಗೆ ಹೋಗಿದ್ದೇವು ಎಂದರೆ ಸರಿಯಲ್ಲ. ಚಾಸಾ-1 ರವರು ತಮ್ಮ ಮನೆಯ ಮುಂದಿನ ಜಾಗೆಯಲ್ಲಿ ಇದ್ದಾಗ ಮಧ್ಯಾಹ್ನ 12.00 ಗಂಟೆಯ ಸುಮಾರಿಗೆ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರಿಂದ 3 ಕೂಡಿಕೊಂಡು ಚಾಸಾ-1 ರವರ ಜೊತೆಗೆ ತಂಟೆ ಮಾಡುತ್ತಾ ಅವಾಚ್ಯ ಶಬ್ದಗಳಿಂದ ಬೈದು ಮನೆ ಖಾಲಿ ಮಾಡಿ ಹೋಗು ಇಲ್ಲದಿದ್ದರೆ ಪಾಲು ಕೊಡುವುದಿಲ್ಲ ಮತ್ತು ಜೀವಂತ ಬಿಡುವುದಿಲ್ಲ ಎಂದು ಅವಾಚ್ಯಾ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ.

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರವರು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ ಸಣ್ಣ ಕೊಡಲಿಯ ಕಟ್ಟಿಗೆಯ ಕಾವಿನಿಂದ ಚಾಸಾ-1 ರವರ ಬಲಗಾಲ ಕುಂಡಿಚೆಟ್ಟಿಗೆ 2-3 ಸಲಾ ಹೊಡೆದಿದ್ದಾ ಎಂದರೆ ಸರಿಯಲ್ಲ. ಆರೋಪಿ ನಂ.2 ರವರು ಚಾಸಾ-1 ರವರಿಗೆ

ಕೈಯಿಂದ ಬಲಗೈ ಭುಜದ ಮೇಲೆ ಮತ್ತು ಎಡಗೈಗೆ ರೆಟ್ಟೆಗೆ ಹೊಡೆದಿದ್ದಳು ಎಂದರೆ ಸರಿಯಲ್ಲ. ಆರೋಪಿ ನಂ.3 ರವರು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-4 ರವರು ಚಾಸಾ-1 ರವರನ್ನು ಬಿಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-1 ರವರು ಆರೋಪಿ ನಂ1 ರವರ ಕೈಯಲ್ಲಿದ್ದ ಕೊಡಲಿಯ ಕಟ್ಟಿಗೆಯ ಕಾವನ್ನು ಕಸಿದುಕೊಂಡಿದ್ದಳು ಎಂದರೆ ಸರಿಯಲ್ಲ. ಚಾಸಾ-1 ರವರ ಎಡಗೈ ರೆಟ್ಟೆ ಮತ್ತು ಬಲಗೈ ಭುಜದ ಮೇಲೆ ಒಳಪೆಟ್ಟಾಗಿದ್ದು, ಚಾಸಾ-1 ರವರ ಬಲಗಾಲು ಚಪ್ಪೆಗೆ ಕೆಂಪು ಹಾಗೂ ಕಪ್ಪು ಬಣ್ಣ ಕಲೆಯಾಗಿ ಪೆಟ್ಟಾಗಿದ್ದವು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದಳು ಎಂದರೆ ಸರಿಯಲ್ಲ. ಈ ಮೇಲ್ಕಂಡತೆ ನಾನು ತನಿಖಾಧಿಕಾರಿಗಳ ಮುಂದೆ ದಿ 28-04-2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಅದನ್ನು ಅಲ್ಲಗಳೆದ ಮೇರೆಗೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ನಂ.1 ರಿಂದ 3 ರವರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿ ಹಲ್ಲೆ ಮಾಡಿರುವುದನ್ನು ನಾನು ನೋಡಿ ಬಿಡಿಸಿಕೊಂಡಿದ್ದರು ಸಹ . ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ</u>

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **26-07-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 4 PW-3

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀಕಾಂತ ಚಂದ್ರಪ್ಪಾ ನಷ್ಟೆ |
| ವಯಸ್ಸು | - | 72 ವರ್ಷ |
| ಉದ್ಯೋಗ | - | ಖಾಸಗಿ ಕೆಲಸ |
| ಸಾಕೀನ | - | ಗೋಕಾಕ |

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ರವರು ನನ್ನ ತಂಗಿ ಆಗಬೇಕು. ಚಾಸಾ-5 ರವರ ಪರಿಚಯ ಇದೆ. ಆರೋಪಿ ನಂ.1 ರವರು ನನ್ನ ತಮ್ಮನಾಗಬೇಕು ಆರೋಪಿ ನಂ.2 ನನ್ನ ತಂಗಿಯಾಗಬೇಕು ಆರೋಪಿ ನಂ.3 ನನ್ನ ಅಳಿಯನಾಗಬೇಕು. ನಾನು ಯಾವುದೆ ಗಲಾಟೆ ನೋಡಿಲ್ಲ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಫ್ರಾಣ ಬೆದರಿಕೆ ಹಾಕಿಲ್ಲ. ಪೋಲಿಸರು ಈ ಪ್ರಕರಣದ ಕುರಿತು ನನಗೆ ವಿಚಾರ ಮಾಡಿಲ್ಲ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಗೋಕಾಕ ನಗರದ ಎ.ಪಿ.ಎಮ್.ಸಿ ಗಾಂಧಿ ನಗರದಲ್ಲಿ ನಮಗೆ ಸೇರಿದ ಒಂದು ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯ ವಿಷಯವಾಗಿ ಚಾಸಾ-1 ಮತ್ತು ಆರೋಪಿ ನಂ.1 ಮತ್ತು 2 ರವರು ಮಧ್ಯೆ ಮನಸಾಮನಸು ಸರಿ ಇರಲಿಲ್ಲ ಎಂದರೆ ಸರಿಯಲ್ಲ. ದಿ 27-06-2017 ರಂದು ನಾನು ಮತ್ತು ಚಾಸಾ-5 ರವರು ಕೂಡಿಕೊಂಡು ಚಾಸಾ-1 ರವರ ಮನೆಗೆ ಹೋಗಿದ್ದೇವು ಎಂದರೆ ಸರಿಯಲ್ಲ. ಚಾಸಾ-1 ರವರು ತಮ್ಮ ಮನೆಯ ಮುಂದಿನ ಜಾಗೆಯಲ್ಲಿ ಇದ್ದಾಗ ಮಧ್ಯಾಹ್ನ 12.00 ಗಂಟೆಯ ಸುಮಾರಿಗೆ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರಿಂದ 3 ಕೂಡಿಕೊಂಡು ಚಾಸಾ-1 ರವರ ಜೊತೆಗೆ ತಂಟೆ ಮಾಡುತ್ತಾ ಅವಾಚ್ಯ ಶಬ್ದಗಳಿಂದ ಬೈದು ಮನೆ ಖಾಲಿ ಮಾಡಿ ಹೋಗು ಇಲ್ಲದಿದ್ದರೆ ಪಾಲು ಕೊಡುವುದಿಲ್ಲ ಮತ್ತು ಜೀವಂತ ಬಿಡುವುದಿಲ್ಲ ಎಂದು ಅವಾಚ್ಯಾ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ.

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರವರು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ ಸಣ್ಣ ಕೊಡಲಿಯ ಕಟ್ಟಿಗೆಯ ಕಾವಿನಿಂದ ಚಾಸಾ-1 ರವರ ಬಲಗಾಲ ಕುಂಡಿಚೆಟ್ಟೆಗೆ 2-3 ಸಲಾ ಹೊಡೆದಿದ್ದಾ ಎಂದರೆ ಸರಿಯಲ್ಲ. ಆರೋಪಿ ನಂ.2 ರವರು ಚಾಸಾ-1 ರವರಿಗೆ ಕೈಯಿಂದ ಬಲಗೈ ಭುಜದ ಮೇಲೆ ಮತ್ತು ಎಡಗೈಗೆ ರೆಟ್ಟೆಗೆ ಹೊಡೆದಿದ್ದಳು ಎಂದರೆ ಸರಿಯಲ್ಲ. ಆರೋಪಿ ನಂ.3 ರವರು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-5 ರವರು ಚಾಸಾ-1 ರವರನ್ನು ಬಿಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-1 ರವರು ಆರೋಪಿ ನಂ1 ರವರ ಕೈಯಲ್ಲಿದ್ದ ಕೊಡಲಿಯ ಕಟ್ಟಿಗೆಯ ಕಾವನ್ನು ಕಸಿದುಕೊಂಡಿದ್ದಳು ಎಂದರೆ ಸರಿಯಲ್ಲ. ಚಾಸಾ-1 ರವರ ಎಡಗೈ ರೆಟ್ಟಿ ಮತ್ತು ಬಲಗೈ ಭುಜದ ಮೇಲೆ ಒಳಪೆಟ್ಟಾಗಿದ್ದು, ಚಾಸಾ-1 ರವರ ಬಲಗಾಲು ಚಪ್ಪೆಗೆ ಕೆಂಪು ಹಾಗೂ ಕಪ್ಪು ಬಣ್ಣ ಕಲೆಯಾಗಿ ಪೆಟ್ಟಾಗಿದ್ದವು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದಳು ಎಂದರೆ ಸರಿಯಲ್ಲ. ಈ ಮೇಲ್ಕಂಡತೆ ನಾನು ತನಿಖಾಧಿಕಾರಿಗಳ ಮುಂದೆ ದಿ 28-04-2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಅದನ್ನು ಅಲ್ಲಗಳೆದ ಮೇರೆಗೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿ ನಂ.1 ರಿಂದ 3 ರವರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿ ಹಲ್ಲೆ ಮಾಡಿರುವುದನ್ನು ನಾನು ನೋಡಿ ಬಿಡಿಸಿಕೊಂಡಿದ್ದರು ಸಹ . ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ</u>

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **17-04-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 2 PW-2

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಶ ಶಂಕರ ಬೆಳಗಾಂವಕರ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ವ್ಯಾಪಾರ |
| ಸಾಕೀನ | - | ಗೋಕಾಕ |

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 3 ರವರ ಪರಿಚಯ ಇದೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ. ನನಗೆ ಪೊಲೀಸರು ಯಾವುದೇ ಪಂಚನಾಮೆಕ್ಕೆ ಕರೆಸಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಹೀಗಾಗಿ ಸದರಿ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2-ಎ ಎಂದು ಗುರುತಿಸಲಾಯಿತು. ನಾನು ನಿಪಿ-2 ಕ್ಕೆ ಪೊಲೀಸ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 28-04-2017 ರಂದು ನನ್ನನ್ನು ಹಾಗೂ ಚಾಸಾ-3 ರವರನ್ನು ಪೊಲೀಸರು ಪಂಚರಾಗಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-3 ರವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಸಾಯಂಕಾಲ 05.45 ರಿಂದ 06.30 ಗಂಟೆಯವರೆಗೆ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆ ಜರುಗಿಸುವಾಗ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕೊಡಲಿಯ ಕಟ್ಟಿಗೆಯ ಕಾವನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು

ಘಟನಾ ಸ್ಥಳದಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**
ಸಾಕ್ಷಿಗೆ ದಿನಾಂಕಃ **11-10-2022** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 1 PW-1

ಸಾಕ್ಷಿದಾರರ ಹೆಸರು - ಸುಮಿತ್ರಾ ಚಂದ್ರಪ್ಪ ನಷ್ಟೆ

ವಯಸ್ಸು - 60 ವರ್ಷ

ಉದ್ಯೋಗ - ಟೇಲರಿಂಗ್

ಸಾಕೀನ - ಗೋಕಾಕ

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-4 ನನ್ನ ಅಣ್ಣ. ಚಾಸಾ-5 ರವರ ಪರಿಚಯ ಇದೆ. ಆರೋಪಿ ನಂ.1 ನನ್ನ ಅಣ್ಣ, ಆರೋಪಿ ನಂ.2 ನನ್ನ ತಂಗಿ, ಆರೋಪಿ ನಂ.3 ನನ್ನ ಅಕ್ಕನ ಮಗನಾಗಬೇಕು. ದಿಃ 27-03-2017 ರಂದು ಆರೋಪಿತರು ನನ್ನ ಜೊತೆ ಜಗಳ ಮಾಡಿರುತ್ತಾರೆ. ನಾವೆಲ್ಲರೂ ಕೂಡಿ ಇದ್ದ ಮನೆ ಆರೋಪಿ ನಂ.2 ಇವರು ತನ್ನದು ಇರುತ್ತದೆ ಎಂದು ನನಗೆ ಮನೆಯಿಂದ ಹೊರಹಾಕುವುದಾಗಿ ಹೆದರಿಸಿ ಆರೋಪಿ ನಂ.1 ಮತ್ತು 3 ರವರ ಕಡೆಯಿಂದ ನನಗೆ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ. ಆರೋಪಿತರು ನನಗೆ ಹೊಡೆ ಬಡೆ ಮಾಡುತ್ತಿರುವುದನ್ನು ನನ್ನ ಅಣ್ಣನ ಮಗನಾದ ಮಹಾಬಲೇಶ್ವರ ಶ್ರೀಕಾಂತ ನಷ್ಟೆ ಈತ ತನ್ನ ಮೊಬೈಲನಲ್ಲಿ ವೀಡಿಯೋ ಮಾಡಿಕೊಳ್ಳುತಿದ್ದುದನ್ನು ಗಮನಿಸಿದ ಆರೋಪಿ ನಂ.1 ರಿಂದ 3 ರವರು ಆತನಿಗೂ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.1 ರವರು ಒಂದು ಕೊಡಲಿ ಕಾವು ತೆಗೆದುಕೊಂಡು ಬಂದು ನನಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.1 ರವರು ನನಗೆ ಮಂಚದ ಮೇಲೆ ಬೀಳಿಸಿ ಕುತ್ತಿಗೆ ಹಿಚುಕಲು ಪ್ರಯತ್ನ ಮಾಡಿರುತ್ತಾನೆ. ನಾನು ತಪ್ಪಿಸಿಕೊಂಡು ಓಡಿ ಬಂದಿರುತ್ತೇನೆ. ಆರೋಪಿ ನಂ.1 ರವರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕೊಡಲಿ ಕಾವನ್ನು ನಾನೀಗ ನೋಡುತಿದ್ದು ಅದನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಮು.ಮಾ.1 ಎಂದು ಗುರುತಿಸಲಾಯಿತು.

ಆರೋಪಿತರು ನನಗೆ ಹೊಡೆ ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದಕ್ಕಾಗಿ ನಾನು ಅದೇ ದಿನ ಪೊಲೀಸ ಠಾಣೆಗೆ ದೂರು ನೀಡಲು ಹೋಗಿದ್ದೆ. ಆರೋಪಿತರು ರಾಜಕೀಯ ಬಲ ಹೊಂದಿರುವುದರಿಂದ ಪೊಲೀಸರು ನಾನು ನೀಡಿದ ದೂರನ್ನು ಸ್ವೀಕರಿಸದೆ ಆರೋಪಿತರನ್ನು ಕರೆಯಿಸಿ ಬುದ್ದಿವಾದ ಹೇಳಿ ಕಳುಹಿಸುತ್ತೇವೆ ಎಂದು ಹೇಳಿ ನಾನು ನೀಡಲು ಹೋದ ದೂರನ್ನು ಸ್ವೀಕರಿಸಿರಲಿಲ್ಲ. ಪೊಲೀಸರು ಆರೋಪಿತರನ್ನು ಠಾಣೆಗೆ ಕರೆಯಿಸಿ ಬುದ್ದಿವಾದ ಹೇಳಿದ್ದರೂ ಸಹ ಆರೋಪಿತರು ಹಳೇ

ಚಾಳಿ ಬಿಡಲಿಲ್ಲ. ನಂತರ ನಾನು ಮಹಿಳಾ ಆಯೋಗಕ್ಕೆ ಹೋಗಿ ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸದರಿ ದೂರನ್ನು ಬೂದಿಗೊಪ್ಪ ವಕೀಲರ ಮುಖಾಂತರ ತಯಾರಿಸಿ ಮಹಿಳಾ ಆಯೋಗಕ್ಕೆ ನೀಡಿರುತ್ತೇನೆ. ನಂತರ ಆರೋಪಿತರು ನನಗೆ ಕಾಡತೊಡಗಿರುವ ಕಾರಣ ನಾನು ಬೆಳಗಾವಿಯ ಪೊಲೀಸ ವರಿಷ್ಟಾಧಿಕಾರಿಗಳ ಬಳಿಗೂ ಹೋಗಿ ಆರೋಪಿತರು ನೀಡುತ್ತಿರುವ ತೊಂದರೆಯನ್ನು ತಿಳಿಸಿರುತ್ತೇನೆ. ನಂತರ ಪೊಲೀಸ್ ವರಿಷ್ಟಾಧಿಕಾರಿಗಳ ಮುಂದೆ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ.

ನಾನೀಗ ಸದರಿ ದೂರನ್ನು ನೋಡುತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಹೀಗಾಗಿ ಸದರಿ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-1-ಎ ಎಂದು ಗುರುತಿಸಲಾಯಿತು. ನಿಪಿ-1ರ ದೂರನ್ನು ಸ್ವೀಕರಿಸಿಕೊಂಡು ಪೊಲೀಸ ವರಿಷ್ಟಾಧಿಕಾರಿ ಬೆಳಗಾವಿರವರು ಪಿ ಎಸ್ ಐ ಗೋಕಾಕರವರಿಗೆ ಪೋನ್ ಮಾಡಿ ವಿಷಯ ತಿಳಿಸಿರುತ್ತಾರೆ. ಪಿ ಎಸ್ ಐ ಗೋಕಾಕರವರು ಆರೋಪಿತರ ಪ್ರಭಾವಕ್ಕೆ ಒಳಗಾಗಿ ಆರೋಪಿತರ ಪರವಾಗಿ ಮಾತನಾಡಿದ್ದು ನಂತರ ನಾನು ಎಸ್ ಪಿ ಬೆಳಗಾವಿರವರಿಗೆ ಆರೋಪಿತರು ಹಲ್ಲೆ ಮಾಡಿದ ಸ್ಥಳದ ಪೋಟೋವನ್ನು ತೋರಿಸಿದಾಗ ಪೊಲೀಸ ವರಿಷ್ಟಾಧಿಕಾರಿಗಳು ಪಿ ಎಸ್ ಐ ಗೋಕಾಕರವರಿಗೆ ಬೈದು ಬುದ್ದಿವಾದ ಹೇಳಿರುತ್ತಾರೆ. ನಂತರ ನಾನು ಸದರಿ ದೂರನ್ನು ತೆಗೆದುಕೊಂಡು ಬಂದು ಗೋಕಾಕ ಪೊಲೀಸ ಠಾಣೆಯವರಿಗೆ ದೂರನ್ನು ನೀಡಿರುತ್ತೇನೆ. ನನ್ನ ದೂರನ್ನು ಸ್ವೀಕರಿಸಿಕೊಂಡು ಪೊಲೀಸರು ಎಫ್.ಐ.ಆರ್ ಮಾಡಿರುತ್ತಾರೆ. ನಂತರ ಒಂದು ತಿಂಗಳು ಮುಗಿದ ನಂತರ ದಿಃ 28-04-2017 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ಘಟನಾ ಸ್ಥಳವನ್ನು ನಾನು ತೋರಿಸಿರುತ್ತೇನೆ. ಪೊಲೀಸರು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.1ನ್ನು ನಾನು ನೀಡಿದ ಮೇರೆಗೆ ಪಂಚರ ಸಮಕ್ಷಮ ಪಡೆದುಕೊಂಡಿರುತ್ತಾರೆ. ಈ ಘಟನೆ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನಂ.1 ಮತ್ತು 2 ರವರು ನನಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.3 ರವರು ನನಗೆ ಹಲ್ಲೆ ಮಾಡಿಲ್ಲ, ಕೇವಲ ಬೈದಿರುತ್ತಾನೆ ಮತ್ತು ದೂರು ಕೊಡಬೇಡ ಎಂದು 4-5 ಸಾರಿ ವಿನಂತಿಸಿಕೊಂಡಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವೈ ಎಲ್ ಡಿ ರವರಿಂದಃ</u>

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಅದರಂತೆ ಡಿಪ್ಲೋಮಾ ಇನ್ ಸಿ ಸಿ ಟಿ ಮಾಡಿರುತ್ತೇನೆ. ಆರೋಪಿ ನಂ.1 ರವರು ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿರುತ್ತಿದ್ದರು ಎಂದರೆ ಸರಿ. ಆರೋಪಿ ನಂ.1ರವರು ಅಂಚೆ ಇಲಾಖೆಗೆ ಬೆಳಗ್ಗೆ 8 ಗಂಟೆಗೆ ಹೋದರೆ ಸಾಯಂಕಾಲ 8 ಗಂಟೆಗೆ ಮರಳಿ ಮನೆಗೆ ಬರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಬೆಳಗ್ಗೆ 7

ಗಂಟೆಗೆ ಹೋಗಿ 10 ಗಂಟೆಗೆ ಪುನಃ ಬಂದು ನಂತರ 3 ಗಂಟೆಗೆ ಹೋಗಿ 6 ಗಂಟೆಗೆ ಮರಳಿ ಬರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ನಂ.3 ರವರು ಗೋಕಾಕಿ ಘಟಪ್ರಭಾ ಶುಗರ್ ಫ್ಯಾಕ್ಟರಿ ಬಳಿ ಇರುವ ತಮ್ಮ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಘಟನೆಯು ಮಧ್ಯಾಹ್ನ 12.00 ಗಂಟೆಗೆ ಆಗಿರುತ್ತದೆ. ಘಟನೆ ಆಗುವ ಸಮಯದಲ್ಲಿ ನಾನು, ನನ್ನ ಅಣ್ಣನ ಮಗ ಮಹಾಬಲೇಶ್ವರ, ಆರೋಪಿ ನಂ.1 ಮತ್ತು 2 ಹಾಗೂ ನನ್ನ ಇನ್ನೊಬ್ಬ ಅಣ್ಣ ವಸಂತ ಚಂದ್ರಪ್ಪ ನಷ್ಟೆ ಮನೆಯಲ್ಲಿ ಇದ್ದೆವು. ನನ್ನ ಅಣ್ಣ ವಸಂತ ಚಂದ್ರಪ್ಪ ನಷ್ಟೆ ಗಲಾಟೆಯನ್ನು ಬಿಡಿಸಿರುವುದಿಲ್ಲ ಬದಲಾಗಿ ನನ್ನ ಅಣ್ಣನ ಮಗ ಮಹಾಬಲೇಶ್ವರ ಮಾಡಿಕೊಳ್ಳುತ್ತಿರುವ ವೀಡಿಯೋ ಮಾಡಕೂಡದು ಎಂದು ಹೇಳುತಿದ್ದ. ಗಲಾಟೆ ಎಷ್ಟು ಸಮಯದವರೆಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವೀಡಿಯೋ ನೋಡಿ ಹೇಳಬಹುದು. ಸದರಿ ವೀಡಿಯೋವನ್ನು ಪೋಲಿಸರು ನನ್ನಿಂದ ಪಡೆದುಕೊಂಡಿರುತ್ತಾರೆ. ನಿಪಿ-1 ರ ದೂರಿನಲ್ಲಿ ಪೊಲೀಸರು ನನ್ನಿಂದ ದೂರನ್ನು ಸ್ವೀಕರಿಸಿರುವುದಿಲ್ಲ ಎನ್ನುವ ಕುರಿತು ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ಗೋಕಾಕಿನ ಮಹಿಳಾ ಆಯೋಗಕ್ಕೆ ಹೋಗಿ ದೂರು ನೀಡಿರುವ ಕುರಿತು ನಿಪಿ-1 ರಲ್ಲಿ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ಬೂದಿಗೊಪ್ಪ ವಕೀಲರು ತಮ್ಮ ಕಾರಿನಲ್ಲಿ ನನ್ನನ್ನು ಮಹಿಳಾ ಆಯೋಗಕ್ಕೆ ಕರೆದುಕೊಂಡು ಹೋಗಿದ್ದರು. ನಂತರ ಮಹಿಳಾ ಆಯೋಗದಿಂದ ಸದರಿ ಬೂದಿಗೊಪ್ಪ ವಕೀಲರು ಪೋಲೀಸ ಠಾಣೆಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಬೂದಿಗೊಪ್ಪ ವಕೀಲರೂ ಸಹ ಪೊಲೀಸರಿಗೆ ದೂರು ಸ್ವೀಕರಿಸಲು ಹೇಳಿದ್ದರು. ಆದರೂ ಸಹ ಪೊಲೀಸರು ನನ್ನ ದೂರನ್ನು ಸ್ವೀಕರಿಸದೆ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಲು ವಕೀಲರಿಗೆ ಹೇಳುತಿದ್ದರು.

ನಿಪಿ-1 ರ ದೂರನ್ನು ನಾನೇ ಬರೆದಿರುತ್ತೇನೆ. ನಿಪಿ-1 ರ ದೂರನ್ನು ಬೆಳಗಾವಿಯ ಎಸ್ ಪಿ ಕಚೇರಿಯವರು ನನಗೆ ನೀಡಿ ಗೋಕಾಕ ಪೊಲೀಸ ಠಾಣೆಗೆ ಕೊಡಲು ಶೀಲು ಹಾಕಿ ಕೊಟ್ಟಿದ್ದರು ಅದನ್ನು ನಾನು ತಂದು ಗೋಕಾಕ ಪೊಲೀಸ ಠಾಣೆಯವರಿಗೆ ನೀಡಿರುತ್ತೇನೆ. ಘಟನೆ ಯಾವ ದಿನ ಆಗಿರುತ್ತದೆ ಎನ್ನುವ ಕುರಿತು ನಿಪಿ-1 ರ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಒಂದು ತಿಂಗಳು ಕಳೆದ ನಂತರ ನಾನು ನಿಪಿ-1 ರ ದೂರನ್ನು ನೀಡಿರುತ್ತೇನೆ. ದಿನಾಂಕ ನೆನಪಿರಲಿಲ್ಲ, ವೀಡಿಯೋದಲ್ಲಿ ದಿನಾಂಕ ಮುದ್ರಣವಾಗಿರುವ ಕಾರಣ ದೂರಿನಲ್ಲಿ ದಿನಾಂಕ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ವಿರುದ್ಧ ನಾನು ಎರಡು ಸಲ ದೂರು ನೀಡಿರುತ್ತೇನೆ. ಆರೋಪಿ ನಂ.3 ರವರು ಪುನಃ ಪುನಃ ದೂರು ಕೊಡಬೇಡ ಎಂದು ಹೇಳಿದ್ದಕ್ಕಾಗಿ ಆರೋಪಿತರು ಉಳಿದುಕೊಂಡಿರುತ್ತಾರೆ ಇಲ್ಲದಿದ್ದರೆ ನಾನು ಆರೋಪಿತರು ನನಗೆ ಹೊಡೆದಾಗ ಒಮ್ಮೊಮ್ಮೆ ದೂರು ಕೊಡುತಿದ್ದೆ ಎಂದು ನುಡಿಯುತ್ತಾರೆ.

ಆರೋಪಿ ನಂ.2 ಮತ್ತು ನಾನು ಇದೇ ನ್ಯಾಯಾಲಯದಲ್ಲಿ ಶಾಶ್ವತ ತಡೆಯಾಜ್ಞೆ ಪರಿಹಾರ

ಕೋರಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯನ್ನು ನಾವು ಪುನಃ ಹಿಂದೆ ತೆಗೆದುಕೊಂಡಿದ್ದೆವು ಎಂದರೆ ಸಾಕ್ಷಿಯು ಪಾಲು ವಿಭಾಗ ಶಾಶ್ವತ ತಡೆಯಾಜ್ಞೆ ದಾವೆಯಲ್ಲಿ ಪಡೆಯಲು ಆಗುವುದಿಲ್ಲ ಎಂಬುದು ಗೊತ್ತಾದ ನಂತರ ಹಿಂದೆ ತೆಗೆದುಕೊಂಡೆವು ಎಂದು ತಿಳಿಸಿರುತ್ತಾರೆ.

ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿಲ್ಲ. ನನ್ನ ಜೊತೆ ಯಾವುದೇ ಗಲಾಟೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಾನು ಘಟನೆಯಾಗಿದೆ ಎಂದು ಹೇಳುವ ಸಮಯದಲ್ಲಿ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನಂ.3 ರವರು ನನಗೆ ದೂರು ಕೊಡಬೇಡ ಎಂದು ತಿಳಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.3 ರವರು ಮು.ಮಾ.1 ರಿಂದ ನನಗೆ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಬಡಿಗೆ ಎಲ್ಲಾ ಕಡೆಯೂ ಸಿಗುತ್ತವೆ ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಯಾವತ್ತೂ ಬಂದಿರಲಿಲ್ಲ, ಯಾವುದೇ ಪಂಚನಾಮೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡಲು ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರು ಬಂದಿರಲಿಲ್ಲ ಎರಡು ಜನ ಪೊಲೀಸರು ಬಂದಿದ್ದರು. ಆರೋಪಿತರಿಗೆ ಕಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಮಹಿಳಾ ಆಯೋಗ, ಎಸ್ ಪಿ ಕಚೇರಿ ಹಾಗೂ ಪೊಲೀಸ ಠಾಣೆಯನ್ನು ಬಿಟ್ಟು ಆರೋಪಿತರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಬೇರೆ ಎಲ್ಲೂ ಹೋಗಿರುವುದಿಲ್ಲ ಎಂದರೆ ಸರಿ. ಆರೋಪಿ ನಂ.1 ಮತ್ತು 2 ರವರ ಸ್ವಾಧೀನಾನುಭವದಲ್ಲಿರುವ ಮನೆಯ ಉಪಭೋಗಕ್ಕೆ ಅಡೆತಡೆ ಮಾಡಬೇಕು ಎನ್ನುವ ಕಾರಣಕ್ಕಾಗಿ ಸುಳ್ಳು ಕತೆ ಕಟ್ಟಿ, ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.